ಇ) ಕೊಳೆಯಾದ ಹಾಸು ಬಟ್ಟೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ 2 ರಿಂದ 3 ದಿನಗಳಿಗೊಮ್ಮೆ ಬದಲಾಯಿಸಲಾಗುತ್ತದೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು ಇಲ್ಲಿ ವಾರಕ್ಕೆ ಎರಡು ಬಾರಿ ಹಾಸಿಗೆಯ ಬಟ್ಟೆಗಳನ್ನು ಬದಲಾಯಿಸಲಾಗುತ್ತದೆ. ಹಾಗೂ ಹೊಸ ರೋಗಿ ಆಸ್ಪತ್ರೆಗೆ ದಾಖಲಾದಾಗ ಮತ್ತೆ ಹಾಸಿಗೆ ಬಟ್ಟೆಗಳನ್ನು ಬದಲಾಯಿಸಲಾಗುತ್ತದೆ.

1118 (760) ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೇರಳದಲ್ಲಿ ಚಿಕ್ಕನ್ ಗೂನ್ಯ ಖಾಯಿಲೆಯು ಹರಡಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಂಡಿರುವ ಕ್ರಮಗಳೇನು ;

ಆ) ಈ ಖಾಯಿಲೆಯ ರೋಗ ಲಕ್ಷಣಗಳ ಬಗ್ಗೆ ರಾಜ್ಯದ ಜನತೆಗೆ ನೀಡಲಾಗಿರುವ ಮಾಹಿತಿ ಬಗ್ಗೆ ತಿಳಿಸುವುದು ;

ಇ) ಇದಕ್ಕಾಗಿ, ಅನುದಾನವನ್ನೇನಾದರು ಒದಗಿಸಿದಿಯೇ ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಚಿಕುನ್‌ಗುನ್ಯ ಕಾಯಿಲೆಯ ತಡೆಗಟ್ಟುವಿಕೆಗಾಗಿ ರಾಜ್ಯದಲ್ಲಿ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ರೋಗ ಹತೋಟಿಗಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಕಾಲಕಾಲಕ್ಕೆ ಸಭೆ ಸೇರಿ ಅವಶ್ಯಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2. ಜೀವರಕ್ಷಕ ಔಷಧಿಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ. ಅಲ್ಲದೆ ಆಯುರ್ವೇದ ವೈದ್ಯರುಗಳು ಇರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಯುರ್ವೇದ ಔಷಧ ಚಿಕಿತ್ಸೆಯನ್ನೂ ಸಹ ನೀಡಲು ವ್ಯವಸ್ಥೆ ಮಾಡಲಾಗಿದೆ.

3. ಸ್ಥಳೀಯವಾಗಿ ಜ್ವರಪೀಡಿತರಿಗೆ ಚಿಕಿತ್ಸೆ ಸಿಗಲು ಅನುಕೂಲವಾಗುವಂತೆ ಔಷಧಿ ವಿತರಣಾ ಕೇಂದ್ರಗಳು ಹಾಗೂ ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸಮಾಜ ಸೇವಕರು, ಶಾಲಾ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಸ್ಥಾಪಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

4. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ಅಡಿಯಲ್ಲಿ ಪ್ರತಿಯೊಂದು ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆಯಾಗಿರುವ

ರೂ. 10000/– ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬಿಡುಗಡೆಯಾಗಿರುವ ರೂ. 7500/–ಗಳ ಅನುದಾನದಲ್ಲಿ ನೈರ್ಮಲ್ಯ ಹಾಗೂ ನೀರಿನ ನಿರ್ವಹಣೆ ಸಮರ್ಪಕವಾಗಿ ನಡೆಸಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಲು ಸೂಚಿಸಲಾಗಿದೆ.

5. ರೋಗದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಹಾಗೂ ಮನೆಗಳಲ್ಲಿ ನೀರು ಶೇಖರಣಾ ತೊಟ್ಟಿಗಳಲ್ಲಿ ಭದ್ರವಾದ ಮುಚ್ಚಳದಿಂದ ಮುಚ್ಚುವ ಬಗ್ಗೆ, ಮನೆಗಳ ಮೇಲ್ಛಾವಣಿಯಲ್ಲಿ ಬಿಸಾಡಿದ ತ್ಯಾಜ್ಯವಸ್ತುಗಳಾದ ಹಳೆಯ ಟೈರುಗಳು, ಒಡೆದ ಪ್ಲಾಸ್ಟಿಕ್ ವಸ್ತುಗಳು, ತೆಂಗಿನ ಚಿಪ್ಪು ಮುಂತಾದ ಮಳೆನೀರು ಸಂಗ್ರಹವಾಗುವಂತಹ ಮುಂತಾದವುಗಳನ್ನು ವಿಲೇವಾರಿ ಮಾಡುವ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ. ರೋಗ ಸಮೀಕ್ಷೆ ಕಾರ್ಯಗಳನ್ನು ತ್ವರಿತಗೊಳಿಸಲಾಗಿದೆ.

6. ಜಿಲ್ಲಾ ಕೀಟಶಾಸ್ತ್ರಜ್ಞರುಗಳು ಕಾವಲು ಸಮೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ರೋಗವಾಹಕ ಸೊಳ್ಳೆಗಳ ಸಮೀಕ್ಷೆ ಮಾಡುತ್ತಿದ್ದಾರೆ.

7. ಸೊಳ್ಳೆಗಳಿಂದ ಹರಡಬಹುದಾದ ರೋಗಗಳ ನಿಯಂತ್ರಣಕ್ಕೆ ಸೂಕ್ತ ಮೇಲ್ವಿಚಾರಣೆ ನಡೆಸಲು ಮಾರ್ಗದರ್ಶನವನ್ನು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ನೀಡಲಾಗಿದೆ.

8. ಕೇರಳ ರಾಜ್ಯದ ಗಡಿ ಜಿಲ್ಲೆಗಳಾದ ಚಾಮರಾಜನಗರ, ಮೈಸೂರು, ದಕ್ಷಿಣ ಕನ್ನಡ (ಮಂಗಳೂರು) ಮತ್ತು ಕೊಡಗು ಜಿಲ್ಲೆಗಳಲ್ಲಿ ರೋಗ ಸಮೀಕ್ಷೆ ನಡೆಸಿ ಸಮರೋಪಾದಿಯಲ್ಲಿ ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಕಾರ್ಯಕ್ರಮಾಧಿಕಾರಿಗಳಿಗೆ ಸೂಚಿಸಲಾಗಿದೆ.

ಆ) ರಾಜ್ಯದ ಜನತೆಗೆ, ಪ್ರತಿದಿನ ಆಕಾಶವಾಣಿಯಲ್ಲಿ ಪ್ರಚಾರ ಮಾಡುವ ಮೂಲಕ, ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದ್ದು, ದಿನಪತ್ರಿಕೆಗಳಲ್ಲಿ ಜಾಹೀರಾತು ಭಿತ್ತಿ ಪತ್ರ/ಕರಪತ್ರಗಳ ಮೂಲಕ ಆರೋಗ್ಯ ಶಿಕ್ಷಣ ನೀಡಲಾಗಿದೆ. ಈ ಮೂಲಕ ಚಿಕುನ್‌ಗುನ್ಯ ರೋಗವು ವೈರಸ್‌ನಿಂದ ಉಂಟಾಗುವ ರೋಗ. ಈ ರೋಗದ ಸೋಂಕು ಹೊಂದಿದ ಈಡಿಸ್ ಈಜಿಪ್ಟ್ ಸೊಳ್ಳೆ ಕಚ್ಚುವಿಕೆಯಿಂದ ಹರಡುತ್ತದೆ. ಸೊಳ್ಳೆ ಕಚ್ಚಿದ 3–4 ದಿನಗಳ ನಂತರ ಜ್ವರ, ಕಣ್ಣು ಕೆಂಪಾಗುವುದು, ಕೀಲುಗಳ ಸಂದುಗಳಲ್ಲಿ ಅತೀವ ನೋವು ಉಂಟಾಗಿ ಓಡಾಡಲು ಸಾಧ್ಯವಾಗದಂತ 5–7 ದಿನಗಳವರೆಗೂ ರೋಗಿಯನ್ನು ಭಾಧಿಸುತ್ತದೆ. ನಂತರ ಈ ರೋಗವು ಸಂಪೂರ್ಣ ಗುಣಮುಖವಾಗಿ ರೋಗಿಯು ಮೊದಲಿನಂತಾಗುತ್ತಾನೆ. ಈ ರೋಗದಿಂದ ಯಾವುದೇ ಮರಣ

ಸಂಭವಿಸುವುದಿಲ್ಲವೆಂದು, ಅರಿವು ಮೂಡಿಸಲಾಗಿದೆ.

ಇ) ಭೂಮೀಕರಣ ಯಂತ್ರಗಳ ಖರೀದಿಗಾಗಿ, ಔಷಧಿ ಮಳಿಗೆಗಳ ಮೂಲಕ ಅವಶ್ಯಕ ಔಷಧಿಗಳ ಪೂರೈಕೆಗಾಗಿ ಮತ್ತು ರಾಸಾಯನಿಕಗಳ ಸರಬರಾಜಿಗಾಗಿ ಇಲ್ಲಿಯವರೆಗೆ ರೂ. 505,15,216/- ವೆಚ್ಚ ಮಾಡಲಾಗಿದೆ.

1119 (761) ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಹಾರಾಷ್ಟ್ರ ರಾಜ್ಯದಲ್ಲಿ ಮಳೆ ಹೆಚ್ಚಾಗಿ ಬೀಳುತ್ತಿರುವುದರಿಂದ ರಾಜ್ಯದ ಕೃಷ್ಣ ನದಿ ನೀರಿನ ಮಟ್ಟ ಅಪಾಯ ಮಟ್ಟವನ್ನು ತಲುಪಿದ್ದು, ಇದರಿಂದ ಉತ್ತರ ಕರ್ನಾಟಕದ ಅನೇಕ ಜಿಲ್ಲೆಯ ಗ್ರಾಮಗಳು ನೀರಿನಿಂದ ಅವೃತಗೊಂಡಿದ್ದು, ಸಾಂಕ್ರಾಮಿಕ ರೋಗಗಳು ಹೆಚ್ಚಾಗುವ ಸಂಭವವಿರುವುದರಿಂದ ರೋಗ ನಿಯಂತ್ರಣಕ್ಕೆ ಪೂರ್ವಬಾವಿಯಾಗಿ ಕೈಗೊಂಡಿರುವ ಕ್ರಮಗಳೇನು ;

ಆ) ಯಾವ ಯಾವ ಜಿಲ್ಲೆಗೆ ಔಷಧಿ ಮತ್ತು ಇತರೆ ವೈದ್ಯಕೀಯ ವಸ್ತುಗಳನ್ನು ಎಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ ;

ಇ) ಸರ್ಕಾರದಿಂದ ಮತ್ತು ಸಂಘ ಸಂಸ್ಥೆಗಳಿಂದ ಸರಬರಾಜಾದ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವುದು ;

ಈ) ಈಗಾಗಲೇ ಇದಕ್ಕಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಮುಂಗಾರು ಪ್ರಾರಂಭವಾಗುವ ಮುಂಚೆಯೇ ಎಲ್ಲಾ ಜಿಲ್ಲೆಗಳಲ್ಲೂ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

2. ಪ್ರವಾಹಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ನಿರಂತರವಾಗಿ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸಲಾಗಿದೆ.

3. ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಚಿಕಿತ್ಸಾ ತಂಡಗಳು ಕಾರ್ಯನಿರ್ವಹಿಸುತ್ತಿವೆ.

4. ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆಗಳನ್ನು